# ಫ್ಲಿಪ್ ಕಾರ್ಟ್ ನಿಂದ ಫರ್ನಿಚರ್ ಕ್ಷೇತ್ರದ ಬಲವರ್ಧನೆ: ಫ್ಲಿಪ್ ಕಾರ್ಟ್ ಪರ್ಫೆಕ್ಟ್ ಹೋಮ್ಸ್ ಜೂನಿಯರ್ ಮೂಲಕ ಸ್ಥಳೀಯವಾಗಿ ಕಿಡ್ಸ್ ಫರ್ನಿಚರ್ ಉತ್ಪಾದನೆ

- **2 ರಿಂದ 16 ವರ್ಷ ಮಕ್ಕಳಿಗಾಗಿ ಹೊಸ ಶ್ರೇಣಿಯ ಫರ್ನಿಚರ್ ಗಳ ಉತ್ಪಾದನೆ**
- **ಮೇಡ್ ಇನ್ ಇಂಡಿಯಾ ಪರಿಕಲ್ಪನೆಯಡಿಯ ಗುಣಮಟ್ಟ ಮತ್ತು ಸುರಕ್ಷಿತವಾದ ಫ್ಲಿಪ್ ಕಾರ್ಟ್ ಫರ್ಫೆಕ್ಟ್ ಹೋಮ್ಸ್ ಜೂನಿಯರ್ ಉತ್ಪನ್ನಗಳು**

ಬೆಂಗಳೂರು, ಜೂನ್ 15, 2020: ಭಾರತದ ದೇಸೀಯ ಇ-ಕಾಮರ್ಸ್ ಮಾರ್ಕೆಟ್ ಪ್ಲೇಸ್ ಆಗಿರುವ ಫ್ಲಿಪ್ ಕಾರ್ಟ್ ಪರ್ಫೆಕ್ಟ್ ಹೋಮ್ಸ್ ಜೂನಿಯರ್ ತನ್ನ ಫರ್ನಿಚರ್ ಆಯ್ಕೆಯನ್ನು ಸರಣಿಯನ್ನು ವಿಸ್ತರಣೆ ಮಾಡಿದೆ. ಸ್ಥಳೀಯವಾಗಿ ತಯಾರಾಗಿರುವ ಬೆಡ್ ಗಳು, ಸ್ಟಡಿ ಡೆಸ್ಕ್ ಗಳು, ಕಿಡ್ಸ್ ಸೀಟಿಂಗ್/ಟೇಬಲ್ ಮತ್ತು ಚೇರ್ ಹಾಗೂ ಸ್ಟೋರೇಜ್/ವಾರ್ಡ್ ರೋಬ್ ಗಳನ್ನು ತಯಾರಿಸುತ್ತಿದೆ. ಗ್ರಾಹಕರ ಸಂಶೋಧನೆ ಪ್ರಕಾರ ಮಕ್ಕಳು ತಮ್ಮದೇ ಆದ ಸ್ಥಳ ಮತ್ತು ಪೀಠೋಪಕರಣಗಳನ್ನು ಒದಗಿಸುವ ಸ್ವಾತಂತ್ರ್ಯವನ್ನು ಹೆಚ್ಚು ಹೊಂದಿದ್ದಾರೆ. ಈ ಸಂಶೋಧನೆಯ ಒಳನೋಟದ ಹಿನ್ನೆಲೆಯಲ್ಲಿ ಫ್ಲಿಪ್ ಕಾರ್ಟ್ ಪರ್ಫೆಕ್ಟ್ ಹೋಮ್ಸ್ ಜೂನಿಯರ್ ಸರಣಿಯನ್ನು ವಿಶೇಷವಾಗಿ `ಮಕ್ಕಳಿಗಾಗಿ ವಿನ್ಯಾಸ' ಗೊಳಿಸಲಾಗಿದೆ ಮತ್ತು ಗಾತ್ರವನ್ನು ಕಡಿಮೆ ಮಾಡಿಲ್ಲ.

ಮಕ್ಕಳ ಶ್ರೇಣಿಯು ಕಾರ್ಯದಕ್ಷತೆ, ವೈಬ್ರೆಂಟ್ ಮತ್ತು ಅತ್ಯುನ್ನತ ದರ್ಜೆಯ ಫರ್ನಿಚರ್ ಅನ್ನು ಒಳಗೊಂಡಿದೆ. ಈ ಫರ್ನಿಚರ್ ಗಳಲ್ಲಿ ವಿಶಾಲವಾದ ಸ್ಟೋರೇಜ್ ಜಾಗ ಮತ್ತು ಅತ್ಯಾಕರ್ಷಕವಾಗಿ ಕಾಣುತ್ತವೆ. ಫ್ಲಿಪ್ ಕಾರ್ಟ್ ನ ಗ್ರಾಹಕ ಕೇಂದ್ರಿತ ತತ್ತ್ವದ ಆಧಾರದಲ್ಲಿ ಪರ್ಫೆಕ್ಟ್ ಹೋಮ್ಸ್ ಜೂನಿಯರ್ ಶ್ರೇಣಿಯಲ್ಲಿ ಸುರಕ್ಷತೆಗೆ ಮೊದಲ ಆದ್ಯತೆ ನೀಡಲಾಗುತ್ತದೆ. ಅಂದರೆ, ರೌಂಡೆಡ್ ಎಡ್ಜ್, ರಾಸಾಯನಿಕಗಳಿಂದ ಮುಕ್ತ, ಯಾವುದೇ ಪಿಂಚ್ ಮಾಡುವ ಭಾಗಗಳಿಲ್ಲದ ಗಟ್ಟಿಮುಟ್ಟಾದ ಭಾಗಗಳಿಲ್ಲ ಹಾಗೂ ದೀರ್ಘಬಾಳಿಕೆ ಸೇರಿದಂತೆ ಮತ್ತಿತರೆ ವೈಶಿಷ್ಟ್ಯತೆಗಳನ್ನು ಒಳಗೊಂಡಿವೆ. ಪ್ರತಿಯೊಂದು ಉತ್ಪನ್ನಗಳನ್ನು ಫ್ಲಿಪ್ ಕಾರ್ಟ್ ನಿಂದ ತರಬೇತಿ ಹೊಂದಿದ ತಂಡದಿಂದ ಅತ್ಯಂತ ಕಠಿಣ ರೀತಿಯಲ್ಲಿ ಪರೀಕ್ಷೆಗೆ ಒಳಪಡಿಸಲಾಗುತ್ತದೆ. ಈ ಮೂಲಕ ಉತ್ಪನ್ನಗಳ ಸುರಕ್ಷತೆ ಮತ್ತು ಗುಣಮಟ್ಟವನ್ನು ನಿರ್ವಹಣೆ ಮಾಡಲಾಗುತ್ತದೆ.

ಫ್ಲಿಪ್ ಕಾರ್ಟ್ ನ ಪ್ರೈವೇಟ್ ಲೇಬಲ್ ವಿಭಾಗದ ಉಪಾಧ್ಯಕ್ಷ ದೇವ್ ಅಯ್ಯರ್ ಅವರು ಮಾತನಾಡಿ, ``ಭಾರತೀಯ ಪೋಷಕರು ತಮ್ಮ ಮಕ್ಕಳಿಗೆ ಸೂಕ್ತವಾದ ಉತ್ಪನ್ನಗಳನ್ನು ಖರೀದಿ ಮಾಡುವಾಗ ಅವರ

ಮನಸ್ಸಿನಲ್ಲಿರುವ ಕಳಕಳಿ ಮತ್ತು ನಿರೀಕ್ಷೆಗಳನ್ನು ಅರ್ಥ ಮಾಡಿಕೊಂಡಿದ್ದೇವೆ. ಇವುಗಳು ಮೌಲ್ಯಾಧಾರಿತ ಮತ್ತು ಅತ್ಯುತ್ಕೃಷ್ಟವಾದ ಗುಣಮಟ್ಟವನ್ನು ಹೊಂದಿರುತ್ತವೆ. ಸುರಕ್ಷತೆ ಮತ್ತು ಕ್ರಿಯಾತ್ಮಕತೆಗಳ ಬಗ್ಗೆ ಹೆಚ್ಚು ಗಮನಹರಿಸುತ್ತಿದೆ. ಫ್ಲಿಪ್ ಕಾರ್ಟ್ ಪರ್ಫೆಕ್ಟ್ ಹೋಮ್ಸ್ ಜೂನಿಯರ್ ಶ್ರೇಣಿಗಳು ಈ ಎಲ್ಲಾ ಅಗತ್ಯತೆಗಳನ್ನು ಪೂರೈಸಲಿವೆ. ಈ ವಿಸ್ತರಣೆಯೊಂದಿಗೆ ನಾವು ನಮ್ಮ ಕೊಡುಗೆಗಳನ್ನು ಆನ್ ಲೈನ್ ಫರ್ನಿಚರ್ ಕ್ಷೇತ್ರದಲ್ಲಿ ಮತ್ತಷ್ಟು ಬಲಗೊಳಿಸುತ್ತಿದ್ದೇವೆ. ವಿಶೇಷವಾಗಿ ಪೋಷಕರು ಮನೆಯಲ್ಲಿರುವ ತಮ್ಮ ಮಕ್ಕಳಿಗೆ ಪ್ರತ್ಯೇಕವಾದ ಜಾಗದ ಬಗ್ಗೆ ಹೆಚ್ಚು ಗಮನಹರಿಸುತ್ತಿರುವ ಈ ದಿನಗಳಲ್ಲಿ ಆನ್ ಲೈನ್ ಫರ್ನಿಚರ್ ಕ್ಷೇತ್ರವನ್ನು ಬಲಗೊಳಿಸುವ ನಿಟ್ಟಿನಲ್ಲಿ ಗಮನಹರಿಸಿದ್ದೇವೆ" ಎಂದು ತಿಳಿಸಿದರು.

ಫ್ಲಿಪ್ ಕಾರ್ಟ್ ಕಳೆದ ಫೆಬ್ರವರಿ 2020 ರಲ್ಲಿ ಪರ್ಫೆಕ್ಟ್ ಹೋಮ್ಸ್ ಸ್ಟುಡಿಯೋ ಶ್ರೇಣಿಯನ್ನು ಬಿಡುಗಡೆ ಮಾಡಿತ್ತು. ಸ್ಲೀಕ್, ಕನಿಷ್ಠ ಮತ್ತು ಕ್ರಿಯಾತ್ಮಕ ಫರ್ನಿಚರ್ ಗಳನ್ನು ಇಷ್ಟಪಡುವ ಯುವ ಸಮುದಾಯವನ್ನು ಗಮನದಲ್ಲಿಟ್ಟುಕೊಂಡು ಈ ಶ್ರೇಣಿಯನ್ನು ಬಿಡುಗಡೆ ಮಾಡಿತ್ತು. ಬೆಲೆ, ಗುಣಮಟ್ಟ ಮತ್ತು ವೆರೈಟಿ ವಿಚಾರದಲ್ಲಿ ಆನ್ ಲೈನ್ ಫರ್ನಿಚರ್ ಆಫರ್ ನಲ್ಲಿನ ಅಂತರವನ್ನು ಕಡಿಮೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಈ ಉತ್ಪನ್ನಗಳು ಸ್ಥಳೀಯವಾಗಿ ಉತ್ಪಾದನೆಯಾಗುವ ಮೂಲಕ ಸ್ಥಳೀಯ ಮಟ್ಟದ ಉತ್ಪಾದನಾ ಸಮುದಾಯದ ಬೆಳವಣಿಗೆಗೆ ನೆರವಾಗುತ್ತದೆ. ಅಲ್ಲದೇ ಉದ್ಯೋಗ ಸೃಷ್ಟಿಗೆ ಸಹಕಾರಿಯಾಗಿ ಅವರ ಜೀವನೋಪಾಯ ಉತ್ತಮವಾಗುವಂತೆ ಮಾಡುತ್ತದೆ.

**About the Flipkart Group**

The Flipkart Group is one of India's leading digital commerce entities and includes group companies Flipkart, Myntra, and PhonePe. Started in 2007, Flipkart has enabled millions of consumers, sellers, merchants and small businesses to be a part of India's e-commerce revolution. With a registered customer base of over 200 million, offering over 150 million products across 80+ categories. Our efforts to democratize e-commerce in India, drive access and affordability, delight customers, create lakhs of jobs in the ecosystem and empower generations of entrepreneurs and MSMEs has driven us to innovate on many industry firsts. Flipkart is known for pioneering services such as Cash on Delivery, No Cost EMI and easy returns – customer-centric innovations that have made online shopping more accessible and affordable for millions of Indians. Together with Myntra, which holds a prominent position in the online fashion market, and PhonePe, India's fastest growing digital payments platform, the Flipkart Group is steering the transformation of commerce in India through technology.

For more details contact media@flipkart.com.